ಮಹಾವೀರ ಕಾಸರ, ಶಿವಮೊಗ್ಗ
*ಮನಬಂದಂತೆ ಬೆಲೆ ಏರಿಸುವ ಸರ್ಕಾರವನ್ನು ಏನೆನ್ನ ಬೇಕು?*




ಭಾರತ ಸರ್ಕಾರ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಜಗಳದಿಂದ ಮೊದಲುಗೊಂಡು ಜಗಳದಿಂದ ಕೊನೆಗೊಳ್ಳುವ ಪ್ರಕ್ರಿಯೆ ಎಲ್ಲಿ ಜಾಸ್ತಿ?*
ಅಪ್ಪಟ ಸಂಸಾರಿಗಳ ಮನೆಯಲ್ಲಿ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಅನ್ನಕ್ಕೆ ಹಸಿದವರಿಗಿಂತ ಪ್ರೀತಿಗೆ ಹಸಿದವರ ಸಂಖ್ಯೆಯೇ ಜಗತ್ತಿನಲ್ಲಿ ಜಾಸ್ತಿ ಇರುವುದು ಏಕೆ?*
ಏಕೆಂದರೆ ಅಕ್ಕಿಯ ಮೂಟೆಗಿಂತ ಅಕ್ಕರೆಯ ಊಟ ವಿರಳ!

ಎಸ್.ಶ್ರೀಧರ್, ಬೆಂಗಳೂರು
*ಮನಸ್ಸು ಆಗಾಗ್ಗೆ ಕೆಡಲು ಕಾರಣವೇನು?*
ಹಾಲಿನಂತಹದ್ದಲ್ಲವೇ, ಹುಳಿ ಹಿಂಡಿದಾಗಲೆಲ್ಲಾ ಕೆಡುತ್ತದೆ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಡಬ್ಬಾ ಪ್ರಶ್ನೆಗಳಿಗೆಲ್ಲಾ ಬಹುಮಾನ ಕೊಡುವುದನ್ನು ಬಿಟ್ಟಿದ್ದೀರಾ?*
ಹಾಗೇನಿಲ್ಲ. ಆದರೆ ಅವುಗಳನ್ನು ಕಳುಹಿಸುವುದನ್ನೇ ನೀವು ನಿಲ್ಲಿಸಿಬಿಟ್ಟಿದ್ದೀರಲ್ಲ!

ಮಹಾವೀರ ಕಾಸರ, ಶಿವಮೊಗ್ಗ
*ಜಗತ್ತಿನಲ್ಲಿ ಕನ್ನಡಿಯನ್ನು ಕಂಡುಹಿಡಿಯದಿದ್ದರೆ?*



ಫಳಫಳ ಹೊಳೆಯುವ ಬೋಡುತಲೆಗೆ ಡಿಮ್ಯಾಂಡ್ ಹೆಚ್ಚುತ್ತಿತ್ತು!

ಕಂಡಕ್ಟರ್ ರಾಜು, ಗುಬ್ಬಿ
*ಭೀಕರ ಬರಗಾಲದ ಛಾಯೆ ಆವರಿಸಿದ್ದರೂ ಸರ್ಕಾರದ ನಾಯಕರು ಸೀಟಿಗಾಗಿ ಕಿತ್ತಾಡುತ್ತಿದ್ದಾರಲ್ಲಾ...?*
ಸರಿಯೇ; ಎಂಜಲೆಲೆಯ ಊಟಕ್ಕಾಗಿ ಕಿತ್ತಾಡುವುದು ನಾಯಿ, ಬರ ಪರಿಹಾರದ ಹಣದೆಂಜಲಿಗೆ ಕಿತ್ತಾಡುವುದು ನಾಯಿ-ಕರು!

ಹೆಚ್.ಆರ್. ಕಡಿವಾಲ, ಬದಾಮಿ
*ಪ್ರೀತಿ, ಪ್ರೇಮ ಪ್ರಣಯ, ಇವುಗಳ ಅಂತರ ತಿಳಿಸಿರಿ...?*
ಪ್ರೀತಿ ವಸ್ತುಗಳ ಮೇಲೂ ಆಗಬಹುದು, ಪ್ರೇಮ ಮನುಜ/ಪ್ರಾಣಿಕುಲಕ್ಕೆ ಸೀಮಿತ; ಪ್ರೀತಿ/ಪ್ರೇಮ + ಕಾಮ= ಪ್ರಣಯ!

ಆರ್, ವಿಜಯಲಕ್ಷ್ಮಿ, ಕೊಳ್ಳೇಗಾಲ
*ಸರ್ಕಾರ ಅನ್ನುವ ಲಕ್ಷ್ಮಿ ಚಂಚಲೆಯೇ?*
ಈಗಂತೂ ಫುಲ್ ಟೈಟ್ ಆದ ಕುಡುಕ ಫಾಟ್ ಸೆಕ್ಷನ್‌ನಲ್ಲಿ ಓಡಿಸುವ ಬ್ರೇಕಿಲ್ಲದ ಕಾರ್‌ನಷ್ಟು ಚಂಚಲ!

ಅಮರಯ್ಯ, ಕಬಾಡಗೇರಾ
*ನಿಮ್ಮ ಅಭಿಪ್ರಾಯದಲ್ಲಿ ಪ್ರಪಂಚದ ಅತ್ಯಂತ ಸೋಜಿಗದ ಸಂಗತಿ ಯಾವುದು?*
182 ವರ್ಷ ಬ್ರಿಟಿಷರು, 66 ವರ್ಷ ಕಳ್ಳ ರಾಜಕಾರಣಿಗಳು ಲೂಟಿ ಹೊಡೆದರೂ ಭಾರತ ಪಾಪರ್ ಆಗದಿರುವುದು!

ಎಚ್. ಸಿದ್ಧಾರ್ಥ ಹೆಬ್ಬಾರ, ಈದು
*ನಮಸ್ಕಾರ- ಪುರಸ್ಕಾರ ಇವುಗಳಲ್ಲಿ ಯಾವುದಕ್ಕೆ ಹೆಚ್ಚಿನ ಬೆಲೆ?*
ನಮಸ್ಕಾರಕ್ಕೆ ಮಾವ ಹಾಕಿದ ಒಂದೇ ನಮಸ್ಕಾರಕ್ಕೆ ಕಡೆಯವರೆಗೂ ಬೆಲೆ ತೆರುತ್ತಲೇ ಇರುತ್ತೇವಲ್ಲ!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಬಹಳ ಜನ ಯುಗಾದಿಗೆ ತಂದ ಪಂಚಾಂಗವನ್ನು ಮುಂದಿನ ಯುಗಾದಿಯವರೆಗೂ ನೋಡುವುದೇ ಇಲ್ಲವಲ್ಲಾ...?*
ದಿನಕ್ಕೆ 25 ಗಂಟೆ ಟಿವಿಯಲ್ಲಿ ಭವಿಷ್ಯ ಅರಚುವ ಭವಿಷ್ಯಭೂತಗಳು ಇರುವಾಗ ಪಂಚಾಂಗ ಬೇಕಾಗುವುದೇ ಇಲ್ಲವಂತೆ!

ಗೀತಾ ಬರ್ಲ, ಬೆಂಗಳೂರು
*ಇಲ್ಲೊಬ್ಬಾಕೆ ಊರಿಗೆ ಬಂದರೂ ನೀರಿಗೆ ಬರುವುದಿಲ್ಲವಲ್ಲಾ...?*
ಬಂದರೆ ನೀವು ಬೋರ್‌ವೆಲ್‌ಗಿಂತಲೂ ಆಳದಷ್ಟು ಸುದೀರ್ಘವಾಗಿ ಕೊರೆಯುತ್ತೀರೆಂದು ಭಯವಂತೆ!

ವಿ. ವೆಂಕಟಾಚಲ, ಬೆಂಗಳೂರು
*ರಾಜಕೀಯ ಮುಖಂಡರ ನೂರಾರು ಎಕರೆ ಜಾಗದಲ್ಲಿ ಕಸ ವಿಲೇವಾರಿ ಮಾಡಬಹುದಲ್ಲವೆ?*
ಗುಡ್ ಐಡಿಯಾ; ಆದರೆ ಅವರ ಆಸ್ತಿ ವಿವರ ಸಿಗುವಷ್ಟರಲ್ಲಿ ಇಡೀ ಊರೇ ಕೊಳೆತು ನಾರೀತು!

## ಬಹುಮಾನಿತ ಪ್ರಶ್ನೆ

ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ
*ತಲೆಸ್ನಾನ ಮಾಡಲು ಸೀಗೇಪುಡಿ ಒಳ್ಳೆಯದೋ ಅಥವಾ ಶಾಂಪೂ ಒಳ್ಳೆಯದೋ?*
ನೀವೇ ಮಾಡುವುದಾದರೆ ಶಾಂಪೂ ಆದೀತು. ಹೆಂಡತಿ ಮಾಡಿಸುವುದಾದರೆ ಎಣ್ಣೆ-ಸೀಗೇಕಾಯಿಯೇ ಸರಿ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಶ್ರೀರಾಮನಾಗಿ ಏಕಪತ್ನೀವ್ರತ ಆಚರಿಸಿದ ದೇವನಿಗೆ, ಶ್ರೀಕೃಷ್ಣನಾದಾಗ 16000 ಪತ್ನಿಯರು ಏಕೆ?*
ಉಲ್ಟಾ ಆಗಲು ಸಾಧ್ಯವಿರಲಿಲ್ಲವಲ್ಲಾ... 16000 ಹೆಂಡತಿಯರೂ ಅವನೊಡನೆ ಕಾಡಿಗೆ ಹೋದರೆ ರಾಮನ ಗತಿ ಅಯ್ಯೋ ರಾಮಾ!!!

ಎಂ. ಶಿವರಾಂ, ಬೆಂಗಳೂರು
*ಒಗ್ಗಟ್ಟನ್ನು ಪ್ರದರ್ಶಿಸಬೇಕಾದ ಒಡೆಯರೇ ಇಕ್ಕಟ್ಟನ್ನು ಸೃಷ್ಟಿಸುತ್ತಿದ್ದಾರಲ್ಲಾ, ಇದರ ಪರಿಣಾಮ ಏನಾಗಬಹುದು?*
ಮತ್ತಷ್ಟು ಕಡುಕೋಪಿಷ್ಟರ ಜನತಾ ಪಕ್ಷ (ಕೆಜೆಪಿ)ಗಳ ಉಗಮ!

ಅನಸೂಯ ಸಿದ್ದರಾಮ, ನಾಗರಬಾವಿ
*ಬರ ಪರಿಸ್ಥಿತಿಯ ಅವಲೋಕನದಲ್ಲೂ ರಾಜಕಾರಣಿಗಳು ಇಷ್ಟಗಲ ಹಲ್ಲು ಬಿಟ್ಟುಕೊಂಡು ಪೋಸ್ ಕೊಡುತ್ತಾರಲ್ಲಾ...?*




ಹೆ(ಹ)ಣದ ವಾಸನೆ ಬಂದಾಗ ಹಿಗ್ಗುವುದು ತೋಳಗಳ ಸ್ವಭಾವ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಮದುವೆಗೂ, ಮೂರ್ಖತನಕ್ಕೂ ಸಂಬಂಧವಿದೆಯೆ?*
ಚೆನ್ನಾಗಿ ಕೇಳಿದಿರಿ. ಮೂರ್ಖತನವೇ ಮದುವೆಯ ತಾಯಿಯಲ್ಲವೇ!!!

ಎಂ.ಎನ್. ಸೋಮಶೇಖರ್, ಮೈಸೂರು
*ಓರ್ವ ವೃದ್ಧನು ತಳುಕುಬಳುಕಿನ ಹುಡುಗಿಯನ್ನು ಆಸೆ ಪಟ್ಟು ಮದುವೆಯಾದರೆ ಆತನ ದಾಂಪತ್ಯಜೀವನ ಹೇಗಿರುತ್ತೆ?*
ಗಳಿಗೆಗೊಂದು ಗುಳಿಗೆಯಾಗಿ ಹೋಂ ನರ್ಸಿಂಗ್ ಹೋಂ ಆಗುತ್ತದೆ!

■ ರಾಮ್